**<u>ಸಾಕ್ಷಿಯನ್ನು ದಿಃ 28.01.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮಧ್ಯಂತರ ಅರ್ಜಿ ಆದೇಶ ಮೇರೆಗೆ ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಈ.ಎಂ. ವಕೀಲರಿಂದಃ–</u>**

ನಾನು 10 ಲಕ್ಷ ರೂ. ಸಾಲವನ್ನು ನೀಡಿದ ಬಗ್ಗೆ ಐ.ಟಿ ರಿಟರ್ನ್ಸ್ ನಲ್ಲಿ ತೋರಿಸಿಲ್ಲದ ಕಾರಣ ಈ ದಾವೆ ಊರ್ಜಿತ ವಲ್ಲ ಎಂದರೆ ಸಾಕ್ಷಿ ಜಮೀನು ಮಾರಾಟ ಮಾಡಿ ಬಂದ ಹಣವನ್ನು ಕೊಟ್ಟಿರುತ್ತೇನೆ ಎನ್ನುತ್ತಾರೆ. ಐ.ಟಿ ರಿಟರ್ನ್ಸ್ ಮಾಡಿದ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿಲ್ಲ. ಅದನ್ನು ನ್ಯಾಯಾಯಕ್ಕೆ ಹಾಜರು ಪಡಿಸಿಲು ನನಗೆ ಯಾವುದೆ ತೊಂದರೆ ಇಲ್ಲ ಎಂದರೆ ಸರಿ. 15 ವರ್ಷದ ಈ.ಸಿ, ಕ್ರಯಪತ್ರಗಳನ್ನು ಪಡೆದು ಸಾಲ ಕೊಡುವಂತಹದ್ದು, ಲೇವಾದೇವಿ ವ್ಯವಹಾರ ಮಾಡುವಂತವರು ಎಂದರೆ ಸಾಕ್ಷಿ ನಾನೇನು ಕೇಳಿರಲಿಲ್ಲ ಅವರಾಗಿಯೇ ಕೊಟ್ಟಿದ್ದರು ಎನ್ನುತ್ತಾರೆ. ಶೇಕಡ 2 ರೂ ನಂತೆ ಬಡ್ಡಿ ಯನ್ನು ಕೊಡುವಂತೆ ಹೇಳಲು ಕಾನೂನಿನಲ್ಲಿ ಅವಕಾಶ ಇರಲಿಲ್ಲ, ಅದರಂತೆ ನಾನವು ಬಡ್ಡಿ ಸಹ ಕೇಳಿರಲಿಲ್ಲ ಎಂದರೆ ಸರಿಯಲ್ಲ. ನಾನು ನಿಗದಿತವಾದ ಆನ್ ಡಿಮ್ಯಾಂಡ್ ಪ್ರನೋಟ್ ನಲ್ಲಿ ವ್ಯವಹಾರ ಮಾಡದಿರುವ ಕಾರಣ ಈ ಕೇಸ್ ಊರ್ಜಿತ ವಲ್ಲ ಎಂದರೆ ಪ್ರತಿವಾದಿಯೆ ಮಾಡಿಕೊಟ್ಟಿದ್ದರು ಎನ್ನುತ್ತಾರೆ. ಶೇಕಡ ರೂ. 2 ರಂತೆ ಬಡ್ಡಿ ಪಡೆಯಲು ನಾನು ಅರ್ಹನಲ್ಲ ಎಂದರೆ ಅವರೆ ಬಡ್ಡಿ ಕೊಡುತ್ತೇವೆ ಎಂದು ಹೇಳಿದ್ದರು ಎನ್ನುತ್ತಾರೆ. ಆನ್ ಡಿಮ್ಯಾಂಡ್ ಯಾ ಆಧಾರ ಪತ್ರ ಎಂದು ನಮೂದು ಇರುವ ಕಾರಣ ನಾನು ಶೇಕಡ 2 ರೂ. ನಂತೆ ನಾನು ಬಡ್ಡಿ ಕೇಳಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.